1885ನೇ ಇಸವಿ ಅರ್ಜೀ ನಂಬರ್ 353.

ಮೃತಪಟ್ಟ ಕೃಷ್ಣಪ್ಪನವರ ಆಸ್ತಿ ವಿಷಯವಲ್ಲಿ—

ಅರ್ಜೀದಾರ ಲಕ್ಷ್ಮೀದೇವಮ್ಮ, ಮೃತಪಟ್ಟ ಸದರೀ ಕೃಷ್ಣಪ್ಪನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಹೊಳೆ ನರಸೀಪುರ ತಾಲ್ಲೂಕು ದೊಡ್ಡಕಾಡನೂರು ಹೋಬಳಿ ಈರೇಹಳ್ಳಿಕೊಪ್ಪಲು ಸ್ಥಳದ ಸದರೀ ಲಕ್ಷ್ಮೀದೇವಮ್ಮನವರು ಸದರೀ ತಾಲ್ಲೂಕು ಗೋಳ್ವಾಡಿ ವಾಸಸ್ಥರಾಗಿ ಮೃತಪಟ್ಟ ಸದರೀ ಕೃಷ್ಣಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 900 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವ ದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರೆಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಲಕ್ಷ್ಮೀದೇವಮ್ಮನವರ ಅರ್ಜೀಯನ್ನು 1885ನೇ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 30ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಕಿ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೃಷ್ಣಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಯರೂ ಈ ಕೋರ್ಟಿನಲ್ಲಿ ಹ್ಯಾಜರ್ ಯಿರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1885ನೇ ಇಸವಿ ಜುಲೈ ತಿಂಗಳು 14ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮದಸ್ತ ಖತ್ತೊಡನೆ ಕೊಡೋಣಾಗಿಧೆ.

ವಿ. ಎಸ್. ನರಸಿಂಹಯ್ಯಂಗಾರ್, ಡಿಸ್ಟ್ರಿಕ್ಟ್ ಜಡ್ಜ್.

ನಗರ ಡಿವೀರ್ಜ್.

ನಗರ್ ಡಿವೀರ್ಜ್ ಡಿ|| ಜಡ್ಜ್‌ರೀಯವರ ಕೋರ್ಟಿನಲ್ಲಿ.

1885ನೇ ಇಸವಿ ದಿವಾಳಿ ಕೆಸ್ ನಂಬರ್ 47.

ದಿವಾಳಿಯಾದ ಡಿಕ್ರೀ ದೇಷೇದಾರ ಕೊಪ್ಪ ತಾಲ್ಲೂಕು ತೆಂಗೇರಿ ವಾಸಸ್ಥ ಪುಟ್ಟನ ವಿಷಯದಲ್ಲಿ—

ಈ ವಿಷಯವು ನಗರ ಡಿವೀರ್ಜ್ ಡಿಸ್ಟ್ರಿಕ್ಟ್ ಜಡ್ಜ್‌ರೀಕೋರ್ಟು ರೂಬರೂ ದಿವಾಳಿಯಾದ ಪುಟ್ಟನ ಸಮಕ್ಷಮದಲ್ಲಿಯೂ ಮತ್ತು ದಿವಾಳಿದಾರನ ಡಿಕ್ರೀ ಲೇನೇದಾರರಾದ ಸೂತಮೆಗ್ಗಡು ತಿಂಗಾಳಪ್ಪನ ತರಫ-ಅಡ್ವೋಕೆಟ್ ಮೆ|| ಕೇತೂರಾಯರ ಯೆದುರಾಗಿಯೂ ದರ್ಯಾಫ್ತು ಮಾಡಲ್ಪಟ್ಟಿತ್ತು.

ಇದೇ ವಿಷಯದಲ್ಲಿ ಸ್ಯ 1885ನೇ ಇಸವಿ ಜುಲೈ 3ನೇ ತಾರೀಖಿನಲ್ಲಿ ಈ ಕೋರ್ಟಿನಿಂದ ಮಾಡಲ್ಪಟ್ಟ ಹುಕ್ಕುಂ ಮೇರಿಗೆ ಪಟ್ಟಿಯಲ್ಲಿ ಕಾಡ್ರಯಾನ ಸಾಲಗಳಿಗೂ ಏರ್ಜ್-ದಿವಾಳಿಯಾದವನ್ನ ದೇವತಃ ಜವಾಬದಾರಿಯಿಂದ ನಿಖಾಲಸ್ಮಾಡಿರುವದಲ್ಲದೆ ಆ ಬಗ್ಯೆ ಸದರೀಯವನ್ನ ದಸ್ತಗಿರೀ ಮಾಡಿ ಕೈದು ಮಾಡುವದರ ದೆಕೆಯಿಂದಲೂ ಬಿಡುಗಡೆಮಾಡಿ ಇರುವದಾಗಿ ಇದರಿಂದ ಹಕ್ಕುಂ ಮಾಡಲ್ಪಟ್ಟು ಇಧೆ.

1885ನೇ ಇಸವಿ ಜುಲೈ 6ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡಲ್ಪಟ್ಟಿಧೆ.

1885ನೇ ಇಸವಿ ಅರ್ಜೀ ನಂಬರ್ 55.

ಮೃತಪಟ್ಟ ನಾರಣಪ್ಪನ ಕೃಷ್ಣಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ವೆಂಕಟರಮಣಯ್ಯ, ಮೃತಪಟ್ಟ ಸದರೀ ನಾರಣಪ್ಪನ ಕೃಷ್ಣಪ್ಪನಿಗೆ ಮಗನು ಆಗಬೇಕೆಂಬ ಹಕ್ಕುದಾರೀ ಮೇಲೆ ಕಡೂರು ತಾಲ್ಲೂಕು ಯಗಟಿ ಸ್ಥಳದ ವೆಂಕಟರಮಣಯ್ಯನು ಸದರೀ ಯಗಟಿ ವಾಸಸ್ಥನಾಗಿ ಮೃತವಟ್ಟ ನಾರಣಪ್ಪನ ಕೃಷ್ಣಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ 800 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ವೆಂಕಟರಮಣಯ್ಯನ ಅರ್ಜೀಯನ್ನು 1885ನೇ ಇಸವಿ ಆಗಸ್ಟು ತಿಂಗಳು ತಾರೀಖು 24ರಲ್ಲು ಕೇಳಿ ಸರಟಿಫಿಕೇಟ ಪಡಿಯತಕ್ಕ ಬಾಧ್ಯತೆಯು ವಿಮರ್ಕಿ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾರಣಪ್ಪನ ಕೃಷ್ಣಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1885ನೇ ಇಸವಿ ಅರ್ಜೀ ನಂಬರ್ 56.

ಮೃತಪಟ್ಟ ಲಿಂಗಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಹಂಚಿನಮನೆ ಗಂಗಂಣ, ಮೃತಪಟ್ಟ ಸದರೀ ಲಿಂಗಪ್ಪನಿಗೆ ಮಗನು ಆಗಬೇಕೆಂಬ ಹಕ್ಕುದಾರೀ ಮೆ ಲ್ಲೂಕು ದೊರನಾಡು ಮೂಗಣಿ ನಂದಿಗ್ರಾಮದ ಗಂಗಂಣನು ಸದರೀ ನಂದಿಗ್ರಾಮದ ವಾಸಸ್ಥನಾಗಿ ಮೃತಪಟ್ಟ ಲಿಂಗಪ್ಪ ಗಿ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಗಂಗಂಣನ ಅರ್ಜೀಯನ್ನು 1885ನೇ ಇಸವಿ ಆಗಸ್ಟು ತಿಂಗಳು ತಾರೀಖು 24ರಲ್ಲು ಕೇಳಿ ಪಡಿಯತಕ್ಕ ಬಾಧ್ಯತೆಯು ವಿಮರ್ಕಿ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಲಿಂಗಂಣನ ಆಸ್ತಿಗೆ ಹಕ್ಕ ಸಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಟ್ಟ, ನರಹರಿರಾವ್, ಡಿಸ್ಟ್ರಿ